<u>ದಿವಾಣಿ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ., ಬಸವಕಲ್ಯಾಣ</u>

**ಸಿ.ಸಿ. ನಂ.2183/2024**

ಫಿರ್ಯಾದಿ : ಜೋಧಸಿಂಗ ಧಾಮಿ ತಂದೆ ಕರ್ನಲ್ ಸಿಂಗ ಧಾಮಿ.

-ವಿರುದ್ದ-

ಆರೋಪಿ : ಸಂತೋಷ ತಂದೆ ಮಲ್ಲಿಕಾರ್ಜುನ ಮಾಲಿ,

## <u>-:ಆಪಾದನೆ:-</u>

ಸಂತೋಷ ತಂದೆ ಮಲ್ಲಿಕಾರ್ಜುನ ಮಾಲಿ,
ವಯಾ-ವಯಸ್ಕ, ಉಃ ಲಾರಿ ವ್ಯಾಪಾರ.
ಸಾ: ಧರ್ಮಪೇಟ ಗಲ್ಲಿ, ಮಂಠಾಳ,
ತಾ: ಬಸವಕಲ್ಯಾಣ, ಜಿ.ಬೀದರ.

**..... ಆರೋಪಿಯಾದ ನೀನ್ನ ಮೇಲೆ**

**ಶ್ರೀ ಜ್ಞಾನೇಶ್ವರ ವಿಠ್ಠಲ ಮಾಳಗಿ ಬಿ.ಎ.ಎಲ್ಎಲ್.ಬಿ. ಸಿವಿಲ್ ನ್ಯಾಯಾಧೀಶರು ಮತ್ತು ನ್ಯಾಯಿಕ ದಂಡಾಧಿಕಾರಿಗಳು, ಬಸವಕಲ್ಯಾಣ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆ,**

ಆರೋಪಿತನಾದ ನೀನು ಪಿರ್ಯಾದಿ ಪೆಟ್ರೋಲ್ ಬಂಕನಿಂದ ನಿನ್ನ ಲಾರಿಗಳಿಗೆ ರೂ.7,00,000/- ಮೊತ್ತದ ಡಿಸೈಲ್‌ನ್ನು ಸಾಲದ ರೂಪದಲ್ಲಿ ಪಡೆದಿದ್ದು, ಸದರಿ ಹಣವನ್ನು ಪಾವತಿಸುವಂತೆ ಪಿರ್ಯಾದಿದಾರರು ಕೇಳಿದಾಗ, ನೀವು ದಿಃ 22-12-2023 ರಂದು ಹೆಚ್.ಡಿ.ಎಫ್. ಬ್ಯಾಂಕ್ ಬಸವಕಲ್ಯಾಣ ಬ್ರ್ಯಾಂಚ್ ಶಾಖೆಯ ಚೆಕ್ಕ ನಂ. 000080, ದಿಃ 22-12-2023 ಮೊತ್ತ ರೂ. 7,00,000/- ನೇದ್ದನ್ನು ಹಣದ ಬದಲಾಗಿ ನೀಡಿದ್ದು, ಸದರಿ ಚೆಕ್ಕನ್ನು ಪಿರ್ಯಾದಿದಾರನು ದಿಃ 16-01-2024 ರಂದು ತಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬಸವಕಲ್ಯಾಣ ಶಾಖೆಯ ಬ್ಯಾಂಕಿನಲ್ಲಿ ಹಣ ಪಾವತಿಗಾಗಿ ಹಾಜರುಪಡಿಸಿದಾಗ, ಸದರಿ ಚೆಕ್ **"ಖಾತೆ ಮುಚ್ಚಲಾಗಿದೆ "**ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡು ದಿಃ 31-01-2024 ರಂದು ಮರಳಿ ಬಂದಿದ್ದು, ಫಿರ್ಯಾದಿದಾರರು ನಿಮಗೆ ಚೆಕ್ ಹಣ ಪಾವತಿಸುವಂತೆ ನೋಟಿಸ್ ನೀಡಿದ್ದರೂ ಸಹಿತ ನೀವು ಸದರಿಯವರ ಹಣ ಪಾವತಿಸಲು ವಿಫಲರಾಗಿದ್ದು, ಆ ಮೂಲಕ ಆರೋಪಿತನಾದ ನೀನು ಕಲಂ 138 ಎನ್.ಐ ಆಕ್ಟರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಇದು ನನ್ನ ಸಂಜ್ಞಾನದೊಳಗೆ ಹಾಗೂ ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬರುತ್ತವೆ ಮತ್ತು ಅವುಗಳಿಗಾಗಿ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

**<u>ಆರೋಪಿತನ ಹೇಳಿಕೆ</u>**

ಪ್ರ:-1 ಓದಿ ಹೇಳಲಾದ ಆಪಾದನೆ ಅರ್ಥವಾಯಿತೇ?
ಉ:

ಪ್ರ:-2 ತಪ್ಪನ್ನು ಒಪ್ಪಿಕೊಳ್ಳುವಿಯಾ ಅಥವಾ ವಿಚಾರಣೆ ಬಯಸುವಿಯಾ?
ಉ:

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಹೇಳಿದ ಆಪಾದನೆಗಳನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ ಅವರು ನೀಡಿದ ಉತ್ತರವನ್ನು ಯತಾಸ್ಥಿತಿಯಲ್ಲಿ ಬರೆದುಕೊಂಡಿದ್ದು ನಿಜವಿರುತ್ತದೆ.)

ಸ್ಥಳ: ಬಸವಕಲ್ಯಾಣ.　　　　ದಿವಾಣಿ ನ್ಯಾಯಾಧೀಶರು
ದಿನಾಂಕ: 08-06-2026.　　　　ಮತ್ತು ಜೆ.ಎಂ.ಎಫ್.ಸಿ., ಬಸವಕಲ್ಯಾಣ.